ಅಸಲು ದಾವೆ ನಂಃ 258/2022 ಪಿ.ಡಬ್ಲ್ಯೂಃ1–ಮಹಾದೇವಿ ಕೋಂ ನಿಂಗನಗೌಡ್ರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 03/09/2025 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ VSB ವಕೀಲರಿಂದಃ**

1. ನಾನು ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ನಮ್ಮ ಕುಟುಂಬದ ಮೂಲ ಪುರುಷರ ಹೆಸರು ರುದ್ರಗೌಡ, ಸಿದ್ದನಗೌಡ್ರ. ನನ್ನ ತಂದೆಯ ಹೆಸರು ಸೋಮಲಿಂಗಪ್ಪ. ಸೋಮಲಿಂಗಪ್ಪನ ತಂದೆಯ ಹೆಸರು ನೀಲಕಂಠಪ್ಪ. ನೀಲಕಂಠಪ್ಪನ ತಂದೆಯ ಹೆಸರು ನನಗೆ ಗೊತ್ತಿಲ್ಲ. ದಾವೆಯನ್ನು ಸಲ್ಲಿಸಲು ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ನನ್ನ ವಾದ ಪತ್ರದ ವಂಶವೃಕ್ಷದಲ್ಲಿ ತೋರಿಸಿರುವ ಈರನಗೌಡ, ಕುಬೇರಗೌಡ, ಮಲ್ಲನಗೌಡ, ವೀರನಗೌಡ ರವರ ತಂದೆಯ ಹೆಸರು ಈರನಗೌಡ ಆಗಿರುತ್ತದೆ. ಈರನಗೌಡ, ಕುಬೇರಗೌಡ, ಮಲ್ಲನಗೌಡ, ವೀರನಗೌಡ ರವರ ತಂದೆಯ ಹೆಸರು ಈರನಗೌಡ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಕೊಟ್ಟಿರುವುದಿಲ್ಲ. ನಾನು ಈ ದಾವೆಯನ್ನು ಸರ್ವೆ ನಂಬರ 51, 52, 53 ಮತ್ತು 54 ರ ಮೇಲೆ ಮಾಡಿರುತ್ತೇನೆ. ಸರ್ವೆ ನಂಬರ 51 ರ ಮಾಲೀಕರು ಶೇಖಯ್ಯರವರು ಆಗಿರುತ್ತಾರೆ. ಸರ್ವೆ ನಂಬರ 51 ರಲ್ಲಿ ನಾಲ್ಕು ಹಿಸ್ಸಾಗಳು ಇರುತ್ತವೆ. ಸರ್ವೆ ನಂಬರ 52 ಮಾಲೀಕರು ರುದ್ರಗೌಡರು ಆಗಿರುತ್ತಾರೆ. ಸರ್ವೆ ನಂಬರ 52 ರಲ್ಲಿ ಎರಡು ಹಿಸ್ಸಾಗಳು ಇರುತ್ತವೆ. ಸರ್ವೆ ನಂಬರ 53 ಮಾಲೀಕರು ನಿಂಗನಗೌಡರು ಆಗಿರುತ್ತಾರೆ. ಸರ್ವೆ ನಂಬರ 53 ರಲ್ಲಿ ಎರಡು ಹಿಸ್ಸಾಗಳು ಇರುತ್ತವೆ. ಸರ್ವೆ ನಂಬರ 54 ಮಾಲೀಕರು ಲಿಂಗನಗೌಡರ ಆಗಿರುತ್ತಾರೆ. ಸರ್ವೆ ನಂಬರ 54 ರಲ್ಲಿ ಎರಡು ಹಿಸ್ಸಾಗಳು ಇರುತ್ತವೆ. ಸರ್ವೆ ನಂಬರ 51, 52, 53 ಮತ್ತು 54 ರ ಮಾಲೀಕರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸರ್ವೆ ನಂಬರ 51, 52, 53 ಮತ್ತು 54 ರ ಮಾಲೀಕರು ನನಗೆ ದಾರಿ ಗಾಗಿ ಅಡ್ಡಿಮಾಡಿರುತ್ತಾರೆಂದರೆ ಸರಿಯಲ್ಲ. ಸರ್ವೆ ನಂಬರ 51, 52, 53 ಮತ್ತು 54 ರ ಮಾಲೀಕರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದ ಹೊರತು ಈ ದಾವೆಯು ಉರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ.

2. ಪ್ರತಿವಾದಿಗಳ ಮನೆತನದ ಮೂಲ ಪುರುಷ ಮರಿಗೌಡ ತಂದೆ ತೋಟನಗೌಡ ಪಾಟೀಲ್ ಎಂದರೆ ಸರಿ. ಮರಿಗೌಡ ತಂದೆ ತೋಟನಗೌಡ ಪಾಟೀಲ್ ರವರಿಗೆ ಮೂರು ಜನ ಮಕ್ಕಳು, ಅವರ ಹೆಸರು 1) ವೀರನಗೌಡ 2) ಬಸನಗೌಡ 3) ಮಲ್ಲನಗೌಡ ಎಂಬ ಮಕ್ಕಳು ಇರುತ್ತಾರೆಂದರೆ ಸರಿ. ಮಲ್ಲನಗೌಡ ರವರಿಗೆ ಬಸಮ್ಮ ಎಂಬ ಹೆಂಡತಿ ಇರುತ್ತಾರೆ ಎಂದರೆ ಸರಿ. ಮಲ್ಲನಗೌಡ ಮತ್ತು ಬಸಮ್ಮ

ಇವರಿಗೆ ಪಾರ್ವತೆವ್ವ ಮತ್ತು ಪರ್ವತಗೌಡ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ. ಪರ್ವತಗೌಡರಿಗೆ ಯಾವುದೇ ಹೆಂಡತಿ ಮತ್ತು ಮಕ್ಕಳು ಇಲ್ಲದೇ ಮರಣ ಹೊಂದಿರುತ್ತಾರೆ ಎಂದರೆ ಸರಿ. ಪಾರ್ವತೆವ್ವ ರವರಿಗೆ ಯಾವುದೇ ಮಕ್ಕಳು ಆಗದೇ ಇರುವುದರಿಂದ ಶಿವಶಂಕರಗೌಡ ರವರನ್ನು ದತ್ತಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಶಿವಶಂಕರಗೌಡ ರವರಿಗೆ ಕಸ್ತೂರೆವ್ವ ಎಂಬ ಹೆಂಡತಿ ಇರುತ್ತಾರೆಂದರೆ ಸರಿ. ಶಿವಶಂಕರಗೌಡ ಮತ್ತು ಕಸ್ತೂರೆವ್ವ ರವರಿಗೆ 1 ರಿಂದ 3 ನೇ ಪ್ರತಿವಾದಿಗಳು ಮಕ್ಕಳು ಇರುತ್ತಾರೆಂದರೆ ಸರಿ. ಸರ್ವೇ ನಂಬರ 56 ರ ಸಂಪೂರ್ಣ ಮಾಲೀಕರು 1 ರಿಂದ 3 ನೇ ಪ್ರತಿವಾದಿಗಳು ಆಗಿರುತ್ತಾರೆಂದರೆ ಸರಿ. ನಮ್ಮ ಕುಟುಂಬಕ್ಕೂ ಮತ್ತು ಪ್ರತಿವಾದಿಗಳ ಕುಟುಂಬಕ್ಕೆ ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ 55 ಮತ್ತು 56 ನ್ನು ನಾವು ಮತ್ತು ಪ್ರತಿವಾದಿಗಳು ಹಂಚಿಕೆ ಮಾಡಿಕೊಂಡಿದ್ದೇವೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ನೀಡಿರುತ್ತೇನೆ . ಸದರಿ ಹಂಚಿಕೆಯ ಬಗ್ಗೆ ಕಾಗದ ಪತ್ರಗಳು ಮನೆಯಲ್ಲಿ ಇರುತ್ತವೆ, ಅವುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಮಾಡುತ್ತೇನೆ. ನಾವು ಮತ್ತು ಪ್ರತಿವಾದಿಗಳು ಒಂದೇ ಕುಟುಂಬಕ್ಕೆ ಸೇರದೇ ಇದ್ದರೂ ಸಹ ಉದ್ದೇಶಪೂರ್ವಕವಾಗಿ ಒಂದೇ ಕುಟುಂಬಕ್ಕೆ ಸೇರಿದವರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯ ಕುಟಂಬಕ್ಕೆ ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಪ್ರತಿವಾದಿಗಳು ಹಾಜರುಮಾಡಿದ ಹಾತನಕಾಶೆಯನ್ನು ತೋರಿಸಿದ್ದು ಸರ್ವೇ ನಂಬರ 51 ರಲ್ಲಿ ಹುಲಿಗೆಮ್ಮನ ದೇವಸ್ಥಾನ ಇರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ. ಹಾತನಕಾಶೆಯಲ್ಲಿ ತೋರಿಸಿರುವಂತೆ ಇ ಎಫ್ ಜಿ ಎಚ್ ಮುಖಾಂತರ ಬಂದು ನಮ್ಮ ಜಮೀನಿಗೆ ಹೋಗುತ್ತವೆ ಎಂದರೆ ಸರಿ.

3. ಸರ್ವೇ ನಂಬರ 52 ರ ಪಕ್ಕದಲ್ಲಿ ಹಾತನಕಾಶೆಯಲ್ಲಿ ತೋರಿಸಿರುವ ಎ ಬಿ ಸಿ ಹದ್ದುಬಸ್ತು ಕಲ್ಲುಗಳು ಎಂದರೆ ಸರಿ. ಸರ್ವೇ ನಂಬರ 52 ರ ಪೂರ್ವ ಬದುವಿನ ಗುಂಟ ಸಾಗಿ ಬಿ ಪಾಯಿಂಟ್ ಹತ್ತಿರ ಬಂದು ಅಲ್ಲಿಂದ ಸಿ ಗೆ ಹೋಗಿ ಸರ್ವೇ ನಂಬರ 53, 54 ರ ಮುಖಾಂತರ ನಮ್ಮ ಜಮೀನಿಗೆ ಹೋಗುತ್ತೇವೆ ಎಂದರೆ ಸರಿ. ಪ್ರತಿವಾದಿಯವರು ಹಾಜರುಮಾಡಿರುವ ಹಾತನಕಾಶೆಯಲ್ಲಿ ತೋರಿಸಿದ ಎರಡು ರಸ್ತೆಗಳ ಮುಖಾಂತರ ಸಾಗುವಳಿ ಮಾಡಿಕೊಂಡು ಬಂದಿರುತ್ತೇವೆ ಎಂದರೆ ಸರಿ. ಈ ಮೇಲೆ ಹೇಳಿದ ಎರಡು ರಸ್ತೆಗಳಲ್ಲ ನಮ್ಮ ಜಮೀನಿಗೆ ಓಡಾಡಿಕೊಂಡು ಇರುವ ಸಂಗತಿ ನನಗೆ ತಿಳಿದಿದ್ದರೂ ಸಹ ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಮಾಹಿತಿಯನ್ನು ನೀಡಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಸರ್ವೇ ನಂಬರ 52 ರಲ್ಲಿ 12 ಹಿಸ್ಸೆಗಳು ಆಗಿರುತ್ತವೆ ಎಂದರೆ ಸರಿ. ಸರ್ವೇ ನಂಬರ 52 ರಲ್ಲಿ ಬಹಳ ಜನರು ಇದ್ದಿದ್ದರಿಂದ 2022 ರಲ್ಲಿ ಅವರು ತಕರಾರು

ಮಾಡಿದ್ದರಿಂದ ನಾವು ಪ್ರತಿವಾದಿಗಳ ಜಮೀನಿನಲ್ಲಿ ಹಾದು ಹೋಗಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು ಸರ್ವೆ ನಂಬರ 51 ರ ಮುಖಾಂತರ ಹಾದು ನಮ್ಮ ಹೊಲಕ್ಕೆ ಹೋಗುತ್ತೇವೆ ಎಂದು ನುಡಿದಿರುತ್ತಾರೆ. ಸರ್ವೇ ನಂಬರ 56 ರಲ್ಲಿ ನನಗೆ ಯಾವುದೇ ಅಧಿಕಾರ ಇಲ್ಲದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್)**

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.